# ನರ್ಸ್‌ಗಳಿಗೆ ಸಲಾಂ!

ನಮ್ಮ ನಿಷ್ಕಾಳಜಿಯ ಕಾರಣದಿಂದ ಕಣ್ಮುಂದೆ ಜೀವವೊಂದು ಕೊನೆಯುಸಿರೆಳೆದುಬಿಟ್ಟರೆ ಎಂಬ ಭಯ ಸದಾ ಇದ್ದೇ ಇರುತ್ತದೆ. ಜಾಗೃತರಾಗಿರಲು ಅಂತಹ ಸಣ್ಣ ಭಯ ಇರಬೇಕು. ಆದರೆ ಒಬ್ಬರಿಗೆ ನಿಭಾಯಿಸಲಾಗದಷ್ಟು ಪೇಷಂಟ್‌ಗಳು ಕಣ್ಣ ಮುಂದೆ ನರಳಾಡುತ್ತಿದ್ದರೆ ದಿಕ್ಕು ತೋಚದಾಗುತ್ತದೆ. ರೋಗಿಗೆ ನಾವು ಇಂಜೆಕ್ಷನ್ ಕೊಟ್ಟಾಕ್ಷಣ ನೋವು ಕಡಿಮೆಯಾಗಿ ಆಯಾಸಭರಿತ ಕಣ್ಣುಗಳನ್ನು ನಮ್ಮತ್ತ ಹೊರಳಿಸಿ ಕಿರುನಗು ಬೀರುವಾಗ ವೃತ್ತಿಯ ಬಗ್ಗೆ ಹೆಮ್ಮೆ ಮೂಡುತ್ತದೆ.



ಎಷ್ಟಾದರೂ ಸರಿ, ಜೀವ ಉಳಿಸಿ ಕೊಡಿ' ಎಂದು ಬೇಡುವಾಗ ಆ ಪರಿಸ್ಥಿತಿಗೆ ಯಾರನ್ನು ದೂರಬೇಕು? ಅವರಿಗೆ ಏನೆಂದು ಉತ್ತರಿಸಬೇಕು?

ಹುಟ್ಟು, ಸಾವು, ನೋವು, ಸಾಂಕ್ರಾಮಿಕ ಮಹಾಮಾರಿಗಳ ನಡುವೆ ರೋಗಿಗಳನ್ನು ಕಾಪಾಡುವ ಜೊತೆ ನಮ್ಮನ್ನು ನಾವು ಮಾನಸಿಕವಾಗಿ ಮತ್ತು ದೈಹಿಕವಾಗಿ ಕ್ರಿಯಾಶೀಲರಾಗಿ ಇಟ್ಟುಕೊಳ್ಳುವುದು ದೊಡ್ಡ ಸವಾಲು. ತಾಳ್ಮೆ, ಕರುಣೆ, ಪ್ರೀತಿ ಇಲ್ಲದೆ ನರ್ಸಿಂಗ್ ವೃತ್ತಿ ಅಸಾಧ್ಯ. ವೃತ್ತಿಯಲ್ಲಿ ಸೇವಾ ಮನೋಭಾವ ಇರಲೇಬೇಕು. ಆದರೆ, ಸೇವೆ ಮಾಡಲೆಂದೇ ಈ ವೃತ್ತಿಯನ್ನು ಆಯ್ಕೆ ಮಾಡಿಕೊಂಡೆ ಎಂದರೆ ಮನಃಸಾಕ್ಷಿಗೆ ವಿರುದ್ಧವಾಗುತ್ತದೆ. ಕೋವಿಡ್ ಏರುಗತಿಯಲ್ಲಿದ್ದಾಗ ಸಾಲು ಸಾಲು ಸಾವುಗಳನ್ನು ಕಣ್ಣಾರೆ ಕಂಡಾಗ ಈ ನರ್ಸ್ ವೃತ್ತಿ ಆಯ್ಕೆ ಮಾಡಿಕೊಂಡಿದ್ದಕ್ಕೆ ಜಿಗುಪ್ಸೆ ಅನಿಸಿದ್ದೂ ಇದೆ.

ಚಿಕ್ಕಮಗಳೂರಿನ ಸರ್ಕಾರಿ ಆಸ್ಪತ್ರೆಯ ಕೋವಿಡ್ ತುರ್ತುನಿಗಾ ಘಟಕದಲ್ಲಿ ಕೆಲಸ ಮಾಡುವಾಗ ಕೇವಲ ಹತ್ತು ನಿಮಿಷಗಳ ಅಂತರದಲ್ಲಿ ಐವರು ಕೋವಿಡ್ ಸೋಂಕಿತರು ಉಸಿರು ಚೆಲ್ಲಿದರು. ಕಣ್ಮುಚ್ಚಿ ಕಣ್ಬಿಡುವುದರೊಳಗೆ ಆದ ಸರಣಿ ಸಾವುಗಳು ಬದುಕಿನ ಕುರಿತಾದ ನಂಬಿಕೆಯನ್ನೇ ಅಲ್ಲಾಡಿಸುವಂತಿದ್ದವು. ಆ ಸಾವುಗಳು ಇಂದಿಗೂ ನನ್ನನ್ನು ಬಹಳ ಕಾಡುತ್ತವೆ. ಈ ನಡುವೆ ನಾನು ಮೂರು ಬಾರಿ ಕೋವಿಡ್ ಸೋಂಕು ಅಂಟಿಸಿಕೊಂಡು ಬದುಕುಳಿದಿದ್ದೇನೆ. ಎಷ್ಟೋ ಸಲ ಸೂಕ್ಷ್ಮ ಸಂವೇದನೆ, ನಮಗೆ ನಾವೇ ಪ್ರಶ್ನೆಗಳನ್ನು ಕೇಳಿಕೊಳ್ಳುವ ಗುಣವೇ ನಮ್ಮನ್ನು ಖಿನ್ನತೆಗೆ, ಅಸಹಾಯಕ ಮನಸ್ಥಿತಿಗೆ ದೂಡುತ್ತವೇನೋ ಅನಿಸುತ್ತವೆ.

ಕೋವಿಡ್ ಸಮಯದಲ್ಲಿ ತುರ್ತು ನಿಗಾ ಘಟಕದ ರಾತ್ರಿ ಪಾಳಿಯಲ್ಲಿ ನಾವು ನಾಲ್ಕು ಜನ ನರ್ಸ್‌ಗಳಾದರೂ ಇರುತ್ತಿದ್ದೆವು. ಪಿಪಿಇ ಕಿಟ್ ಹಾಕಿಕೊಂಡು ತುಂಬ ಸಮಯ ವಾರ್ಡ್‌ನಲ್ಲಿ ಇರಲು ಸಾಧ್ಯವಾಗದ ಕಾರಣ, ಒಬ್ಬರು ಪಿಪಿಇ ಕಿಟ್‌ನಲ್ಲಿ ಕೋವಿಡ್ ಸೋಂಕಿತರ ಬಳಿ ಮೂರು ತಾಸು ಕೆಲಸ ಮಾಡುವುದು ಎಂದು ಪಾಳಿ ಮಾಡಿಕೊಂಡಿದ್ದೆವು. ಇನ್ನುಳಿದವರು ವರದಿ ತಯಾರಿಸುವುದು ಮತ್ತು ಇತರ ಕೆಲಸಗಳನ್ನು ಮಾಡುತ್ತಿದ್ದೆವು.

ಅದೊಂದು ದಿನ ಯಾವುದೋ ಹಬ್ಬವಿತ್ತು. ತುರ್ತು ನಿಗಾ ಘಟಕದಲ್ಲಿ ನಾವು ಇಬ್ಬರೇ ನರ್ಸ್‌ಗಳು ರಾತ್ರಿ ಪಾಳಿಯಲ್ಲಿದ್ದೆವು. ನನ್ನ ಜೊತೆ ರಾತ್ರಿ ಪಾಳಿಯಲ್ಲಿದ್ದ ನರ್ಸ್ ಎಂಟು ತಿಂಗಳ ಗರ್ಭಿಣಿ. ಅವರಿಗೇಕೆ ಕಷ್ಟ ಕೊಡಬೇಕು ಎಂದು ನಾನು ಸುಮಾರು 12 ತಾಸುಗಳ ಕಾಲ ಪಿಪಿಇ ಕಿಟ್ ಧರಿಸಿ, ತುರ್ತು ನಿಗಾ ಘಟಕದಲ್ಲಿ ಕೆಲಸ ಮಾಡಿದೆ. ಊಟವಿಲ್ಲ, ನೀರಿಲ್ಲ, ನಿದ್ರೆಯಿಲ್ಲ, ಶೌಚ ಕಾರ್ಯಗಳಿಲ್ಲ. ಸೆಕೆ ಕುಚ್ಚುವ ಪಿಪಿಇ ಕಿಟ್ ಒಳಗೆ ಇರುವುದು ಅಷ್ಟು ಸುಲಭವಲ್ಲ. ಕಿಟ್ ತೆರೆದು ನೋಡಿದರೆ ಬೆಳಗಾಗುವುದರೊಳಗೆ ರೋಗಿಷ್ಠನಂತೆ ಕೈ ಕಾಲು ಬಿಳಿಚಿಕೊಂಡು ಚರ್ಮ ಸುಲಿದು ಬರುವಂತಿತ್ತು. ನನ್ನದು ಈ ಪರಿಸ್ಥಿತಿಯಾದರೆ, ಎಂಟು ತಿಂಗಳ ಗರ್ಭಿಣಿಯಾಗಿಯೂ ಸಾಲು ಸಾಲು ಸಾವುಗಳಾಗುವ ಕೋವಿಡ್ ವಾರ್ಡ್‌ನಲ್ಲಿ ದುಡಿಯಬೇಕಾದ ಅನಿವಾರ್ಯತೆಯಿರುವ ನನ್ನ ಸಹೋದ್ಯೋಗಿಯ ಕಥೆ ನನ್ನಲ್ಲಿ ನೂರು ಪ್ರಶ್ನೆಗಳನ್ನು ಹುಟ್ಟು ಹಾಕಿದ್ದವು. ಇದನ್ನೆಲ್ಲಾ ನೋಡುವಾಗ ಸಾವು ನೋವುಗಳ ನಡುವೆ ಕೆಲವೊಮ್ಮೆ ನಾವು, ಬದುಕನ್ನು ಪಣಕ್ಕಿಟ್ಟು ಕೆಲಸ ಮಾಡಲು 'ಸೇವೆ' ಎಂಬ ಮಾದಕ ಶಕ್ತಿಯನ್ನು ತುಂಬಿ ಕಳುಹಿಸಲಾಗುತ್ತದೆ ಎನಿಸುತ್ತದೆ. ಸೈನಿಕರದು ಇದೇ ಪಾಡಲ್ಲವೆ?

ಖಾಸಗಿ ಆಸ್ಪತ್ರೆಯೊಂದರಲ್ಲಿ ಕೆಲಸ ಮಾಡುವಾಗ ಎಮರ್ಜೆನ್ಸಿ ವಾರ್ಡ್‌ನಲ್ಲಿ ಅಂದು ನಾನೊಬ್ಬನೇ ಇದ್ದೆ. ಕಾರು ಆಕ್ಸಿಡೆಂಟ್ ಆಗಿ ಐದು ಜನ ತೀವ್ರ ಗಾಯಗೊಂಡು ಆಸತ್ರೆಗೆ ಬಂದಿದ್ದರು. ಅವರ ಒದ್ದಾಟ–ಚೀರಾಟ ನೋಡಿ ಯಾರನ್ನು ಅಟೆಂಡ್ ಮಾಡಬೇಕು, ಹೇಗೆ ಮಾಡಬೇಕು ಎನ್ನುವುದು ಗೊತ್ತಾಗದೆ ದಿಕ್ಕೆಟ್ಟು ಹೋಗಿದ್ದೆ. ಡಾಕ್ಟರ್ ಏನು ಹೇಳುತ್ತಿದ್ದಾರೆ ಎಂಬುದು ಅರಿವಿಗೆ ಬರುತ್ತಿರಲಿಲ್ಲ. ಯಾರ ನೋವು ಹೆಚ್ಚು, ಯಾರ

